# ನಗರಸಭೆ, ರಬಕವಿ-ಬನಹಟ್ಟಿ

(ಜಿಲ್ಲಾ : ಬಾಗಲಕೋಟ) **ಕಾರ್ಯಾಲಯ: ರಾಮಪೂರ**

**e-mail ID**: itstaff_ulb_rabkavibanahatti@yahoo.co.in http://www.rabkavi-banahatticity.mrc.gov.in


ಕ್ರ.ಸಂ. ನಸ/ರಬ/ಆಡ/2021-22

ದಿನಾಂಕ:18-01-2022 (21)

## -: ಪ್ರಮಾಣ ಪತ್ರ :-

ಕನ್ನಡದ ಕಟ್ಟಾಳು, ಶಿಕ್ಷಣ ಪ್ರೇಮಿ, ತ್ಯಾಗ ಜೀವಿಗಳೂ ಆದ ಶ್ರೀ. ತಮ್ಮಣ್ಣಪ್ಪ ಚಿಕ್ಕೋಡಿಯವರ ಅಮೃತ ಹಸ್ತದಿಂದ ಸ್ಥಾಪನೆಗೊಂಡ ಜನತಾ ಶಿಕ್ಷಣ ಸಂಘ 1935 ರಿಂದ ಬನಹಟ್ಟಿ ಹಾಗೂ ಸುತ್ತಮುತ್ತಲಿನ ಬಡ, ಕಾರ್ಮಿಕರ, ನೇಕಾರ, ದೀನ ದಲಿತರ ಮಕ್ಕಳಿಗೆ ಉತ್ಕೃಷ್ಟ ಶಿಕ್ಷಣ ಕೊಡುವುದರ ಜೊತೆಗೆ ದೇಶಾಭಿಮಾನ, ರಾಷ್ಟ್ರೀಯ ಐಕ್ಯತೆ, ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತಿರುವುದು ಪ್ರಶಂಸನೀಯ.

ಇಂತಹ ವಿದ್ಯಾಸಂಸ್ಥೆಯಲ್ಲಿ ವನ ಮಹೋತ್ಸವದಂತಹ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಸೇವಾ ಯೋಜನೆಗಳ ಮೂಲಕ ಆವರಣವನ್ನು ಸ್ವಚ್ಛಗೊಳಿಸುವ ಮೂಲ ಉದ್ದೇಶವನ್ನು ಇಟ್ಟುಕೊಂಡು ವಿಧ್ಯಾರ್ಥಿಗಳ ಜೊತೆಗೆ 6 ಜನ ಪರಿಚಾರಕರನ್ನು ದೈನಂದಿನ ಸ್ವಚ್ಛತಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನಿಗಾವಹಿಸಿರುತ್ತೀರಿ. ಈ ಬಗ್ಗೆ ನಿಮ್ಮ ವಿದ್ಯಾಸಂಸ್ಥೆಯ ಆವರಣವನ್ನು ಪರಿಶೀಲಿಸಲಾಗಿ " ಸ್ವಚ್ಛ ಭಾರತ, ತಂದುರುಸ್ತ ಭಾರತ " ಎಂಬ ಉಕ್ತಿಯನ್ನು ಸಫಲರಾಗಿಸಿ ಸ್ವಚ್ಛ ಮತ್ತು ಹಸಿರು **(Clean & Green Campus)** ಆವರಣ ಇರುತ್ತದೆ ಎಂದು ದೃಢೀಕರಿಸಿ ಪ್ರಮಾಣೀಕರಿಸಲಾಗಿದೆ.

21/1

ಪೌರಾಯುಕ್ತರು,
ನಗರಸಭೆ, ರಬಕಬ-ನಹಟ್ಟಿ

ಗೆ,
ಜೆ ಎಸ್ ಎಸ್, ಎಸ್ ಟಿ ಸಿ
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬನಹಟ್ಟಿ

ಎಸ್ ಬಿ ಇಂಗಳೆ
ತಹಸೀಲದಾರ
ಹಾಗೂ ವ ತಾಲೂಕಾ ದಂಡಾಧಿಕಾರಿಗಳು
ರಬಕವಿ-ಬನಹಟ್ಟಿ 587311

ಕರ್ನಾಟಕ ಸರ್ಕಾರ
Government Of Karnataka

S B Ingale
Tahasildar
Taluka Executive Megistrate
Rabakavi-Banahatti 587311

ದಿನಾಂಕ:19/01/2022

# ಅಭಿನಂದನಾ ಪ್ರಮಾಣ ಪತ್ರ

ನಮ್ಮ ರಬಕವಿ-ಬನಹಟ್ಟಿ ಎಸ್.ಟಿ.ಸಿ ಮಹಾವಿದ್ಯಾಲಯಕ್ಕೆ ಚುನಾವಣೆ ಕಾರ್ಯದ ನಿಮಿತ್ಯ ನಾಲ್ಕು ದಿನಗಳ ಕಾಲ ಭೇಟ್ಟಿಕೊಟ್ಟಾಗ ಈ ಮಹಾವಿದ್ಯಾಲಯದಲ್ಲಿರುವ ಉತ್ತಮ, ಅರ್ಹತೆ, ಸಮರ್ಪನಾ ಭಾವ ಹಾಗೂ ಸಾಮಾಜಿಕ ಕಳಕಳಿಯನ್ನು ಹೊಂದಿದ ಬೋಧಕ/ಬೋಧಕೇತರರು, ಸುಸಜ್ಜಿತ ಕಟ್ಟಡ, ವಿಶಾಲವಾದ ಮೈದಾನ, ಸುಸಜ್ಜಿತ ಗಣಿಕೃತ ಗ್ರಂಥಾಲಯ, ಸುಸಜ್ಜಿತ ಗಣಕಯಂತ್ರ ಪ್ರಯೋಗಾಲಯ, ಮಹಾವಿದ್ಯಾಲಯವು ಸ್ವಚ್ಚ ಹಾಗೂ ಹಸಿರು ನಿರ್ಮಿತ ಸುಂದರ ವಾತಾವರಣ (Clean And Green Campus) ಹೊಂದಿರುವ ರಬಕವಿ-ಬನಹಟ್ಟಿ ತಾಲೂಕಿನ ಎಸ್.ಟಿ.ಸಿ ಮಹಾವಿದ್ಯಾಲಯ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಬಹಳಷ್ಟು ಅನುಕೂಲವಾಗಿದೆ ಮತ್ತು ಈ ಮಹಾವಿದ್ಯಾಲಯದಲ್ಲಿರುವ ಸಿಬ್ಬಂದಿಗಳ ಕಾರ್ಯವೈಕರಿ ಮೆಚ್ಚುಗೆದಾಯಕವಾಗಿದೆ ಎಂದು ಈ ಮೂಲಕ ತಾಲೂಕಾ ಆಡಳಿತದ ಪರವಾಗಿ ಪ್ರಮಾಣಿಕರಿಸುತ್ತೇನೆ.

ತಹಶೀಲ್ದಾರ ರಬಕವಿ-ಬನಹಟ್ಟಿ
TAHASILDAR
RABKAVI-BANAHATTI

ಗೆ,
ಪ್ರಾಚಾರ್ಯರು
ಎಸ್.ಟಿ.ಸಿ ಮಹಾವಿದ್ಯಾಲಯ ಬನಹಟ್ಟಿ

TALUKA MAGISTRATE RABKAVI-BANAHATTI